ಒಮ್ಮೆಯಂತೂ ವೇಣು – ರಾಧಾ ಇಬ್ಬರೂ ಗಣೇಶಪಾಲಕ್ಕೆ ಹೋಗಿ ಬರುತ್ತೇವೆಂದು ಬೆಳಿಗ್ಗೆಯೇ ಹೊರಟವರು, ಎಷ್ಟೊತ್ತಾದರೂ ಸುದ್ದಿಯಿಲ್ಲ. ಹೋಗಿ ಬರಲು ಎರಡು ತಾಸು, ಪೂಜೆ ಪುನಸ್ಕಾರಕ್ಕೆ ಒಂದು ತಾಸು ಎಂದು ಹಿಡಿದರೂ ಮಧ್ಯಾಹ್ನಕ್ಕೆಲ್ಲ ಬಂದುಬಿಡಬೇಕಿತ್ತು. 'ದೇವಸ್ಥಾನಕ್ಕೇಕೆ ಮೊಬೈಲು' ಎಂದು ಫೋನನ್ನೂ ಮನೆಯಲ್ಲೇ ಬಿಟ್ಟು ಹೋಗಿದ್ದಾರೆ.

ಮಗನ ತಾಳಕ್ಕೆ ಕುಣಿಯುವ ಶಂಕ್ರಣ್ಣನಿಗೂ ಆವತ್ತು ಗಲಿಬಿಲಿ ಇಟ್ಟುಕೊಂಡಿತು. ಮಧ್ಯಾಹ್ನವಾಯ್ತು, ಸಾಯಂಕಾಲವಾಯ್ತು, ರಾತ್ರಿ ಏಳು ಗಂಟೆ... ಎಂಟು ಗಂಟೆ... ಇನ್ನು ತಡ ಮಾಡುವುದು ಸರಿಯಲ್ಲ

